ಪೂಜ್ಯ ಡಾಕ್ಟರ್‌ಜೀ ಎಂದು ಇಲ್ಲಿ ಅಕ್ಕರೆಯಿಂದ ಕರೆಯಿಸಿಕೊಳ್ಳುವ ಆದರಣೀಯ ಡಾ. ಎ. ಚಂದ್ರಶೇಖರ ಉಡುಪರವರ ಆಧ್ಯಾತ್ಮಿಕ ಹಾಗೂ ವೈದ್ಯಕೀಯ ಚಿಂತನ – ಸಂಶೋಧನೆಗಳ ಮೂಸೆಯಿಂದ ಹೊರಹೊಮ್ಮಿದ ಸ್ಫೂರ್ತಿದಾಯಕ ಕೇಂದ್ರವಾಗಿರುವ ಎಸ್. ಎಚ್. ಆರ್. ಎಫ್. ಯೋಗಬನ, ಡಿವೈನ್ ಪಾರ್ಕ್‌ನ ಮುಂದುವರಿದ ಯೋಜನಾ ಕೇಂದ್ರ. ಸಮಾಜಸೇವೆ ಮತ್ತು ದೇಶ ಕಟ್ಟುವ ಕಾಯಕವನ್ನು ಹೆಗಲಿಗೇರಿಸಿಕೊಂಡು ಹಗಲಿರುಳು ಶ್ರಮಿಸುತ್ತಿರುವ ವೈದ್ಯಲೋಕದ ಅಪರೂಪದ ಮಾನವತಾವಾದಿ, ಆಧ್ಯಾತ್ಮಿಕ ಚಿಂತಕರಾದ ಪೂಜ್ಯ ಡಾಕ್ಟರ್‌ಜೀ ಯವರು, ಕೇವಲ ವೈದ್ಯರು ಮಾತ್ರವಲ್ಲದೆ ತನ್ನ ಶಿಕ್ಷಣಾವಧಿಯಲ್ಲಿ ಚಿನ್ನದ ಪದಕವನ್ನು ಮುಡಿಗೇರಿಸಿಕೊಂಡ ಚಿನ್ನದಂತ ಆಧ್ಯಾತ್ಮ ಗುರು.

ಸಂಸ್ಥೆಯು ಅಂತಾರಾಷ್ಟ್ರೀಯ ಗುಣಮಟ್ಟದ ಉಪಕರಣಗಳಿಂದ ಸುಸಜ್ಜಿತವಾಗಿದೆ. ಚಿಕಿತ್ಸಾ ವಿಭಾಗ, ವ್ಯಾಯಾಮ ಮತ್ತು ಪುನರ್ವಸತಿ ಚಿಕಿತ್ಸಾ ವಿಭಾಗ, ಅಡುಗೆ ಮನೆ, ಹಬೆ ಸ್ನಾನ ವಿಭಾಗ, ಯೋಗ ಸಭಾಂಗಣ, ಯೋಗ ಗೃಹ, ಸುಸಜ್ಜಿತ ಆಟದ ಮೈದಾನ, ಉಡುಪು ಸ್ವಚ್ಛತಾ ವಿಭಾಗ, ಉದ್ಯಾನ ಹಾಗೂ ಎಲ್ಲ ರೀತಿಯ ಉಪಕರಣಗಳು ಉಚ್ಚ ಶ್ರೇಣಿಯ ಪ್ರತೀಕ; ಉನ್ನತ ಮಾನದಂಡದ ದ್ಯೋತಕ.

ಲೈಫ್ ಲವರ್ಸ್‌ಗಾಗಿ ಪ್ರಶಾಂತ ವಾಸಗೃಹಗಳು

ಅತಿಥಿಗಳಿಗೆ ಅತ್ಯುನ್ನತ ಆರಾಮದಾಯಕ ಮತ್ತು ಆಧುನಿಕ ಜೀವನಶೈಲಿಯ ಸೌಲಭ್ಯಗಳನ್ನು ನೀಡುವ ಮುಖ್ಯ ಗುರಿಯೊಂದಿಗೆ ಸಂಸ್ಥೆಯನ್ನು ನಿರ್ಮಾಣ ಮಾಡಲಾಗಿದೆ. ಎಲ್ಲಾ ಕೊಠಡಿಗಳಲ್ಲಿ ಸುರಕ್ಷಿತ ಭದ್ರತಾ ಲಾಕರ್‌ಗಳಿದ್ದು, ಇತರ ಎಲ್ಲಾ ಪ್ರಸಾಧನ ವ್ಯವಸ್ಥೆಗಳಿವೆ. ಓದುವ ಮೇಜು, ವೈಜ್ಞಾನಿಕವಾಗಿ ತಯಾರಿಸಲ್ಪಟ್ಟ ಆರಾಮದಾಯಕ ಹಾಸಿಗೆ, ಕೊಠಡಿಗೆ ಹೊಂದಿಕೊಂಡಂತೆ ಸುಸಜ್ಜಿತ ಸ್ನಾನಗೃಹ ಎಲ್ಲವೂ ನಿಮ್ಮ ಸೇವೆಗಾಗಿ. ಸ್ನಾನಗೃಹದಲ್ಲಿ ಚಿಮುಕು ಸ್ನಾನದ ವ್ಯವಸ್ಥೆ ಹಾಗೂ ತಾಮ್ರದ ಪಾತ್ರೆಯಲ್ಲಿ ಬಿಸಿನೀರು ಸ್ನಾನದ ಸೌಲಭ್ಯ ಎರಡೂ ಇದೆ. ಈ ಎಲ್ಲ ಸೌಲಭ್ಯಗಳಿಂದ ಅತಿಥಿಗಳಿಗೆ ಐಷಾರಾಮಿ ವಿಹಾರ ಸ್ಥಳದಲ್ಲಿ ದಿನಕಳೆದ ಅನುಭವ ಆಗದೆ ಇರದು! **ನಮ್ಮಲ್ಲಿ ವಿಶಿಷ್ಟ ಕೊಠಡಿ, ಅತ್ಯುನ್ನತ ವಾತಾನುಕೂಲಿ/ ವಾತಾನುಕೂಲ ರಹಿತ ಕೊಠಡಿ, ಅರೆ ಕುಟೀರಗಳು ಹಾಗೂ ಸರ್ವ ಸಜ್ಜಿತ ಕುಟೀರಗಳಿವೆ.**

ಬನ್ನಿ! ಮುಂದಿನ ಬಾಳ ಪಯಣಕ್ಕಾಗುವಷ್ಟು
ನೆನಪುಗಳನ್ನು ಹೊತ್ತು ಮುಂದೆ ಸಾಗಿ

ಬುಕ್ ಮಾಡಿ

ಸರ್ವ ಕ್ಷೇಮ ಆಸ್ಪತ್ರೆ ಮತ್ತು ಸಂಶೋಧನಾ ಪ್ರತಿಷ್ಠಾನ
ಯೋಗ ಬನ, ಮೂಡು ರಿಆಯಾರು, ಕೋಟ ಪೋಸ್ಟ್,
ಉಡುಪಿ ಜಿಲ್ಲೆ, ಕರ್ನಾಟಕ - 576221
+91 96060 31231 / 96060 31232 | info@shrfyoga.com
www.shrfyoga.com

ಯೋಗಬನ

SHRF YOGA BANA

ಸರ್ವಕ್ಷೇಮ ಆಸ್ಪತ್ರೆ ಮತ್ತು ಸಂಶೋಧನಾ ಪ್ರತಿಷ್ಠಾನ, (ಎಸ್.ಎಚ್.ಆರ್.ಎಫ್)

ಯೋಗಬನ

ಯೋಗ ಚಿಕಿತ್ಸೆ, ಆಯುರ್ವೇದ ಮತ್ತು ಪ್ರಕೃತಿ ಚಿಕಿತ್ಸಾ ಲೋಕ

www.shrfyoga.com

ಎಸ್.ಎಚ್.ಆರ್.ಎಫ್ ಯೋಗಬನ

ಪ್ರಕೃತಿಯ ಮಡಿಲಲ್ಲಿ ಮನೆಮಾಡಿರುವ ಯೋಗ, ಪ್ರಕೃತಿ ಚಿಕಿತ್ಸೆ ಮತ್ತು ಆಯುರ್ವೇದ ಆಸ್ಪತ್ರೆ

ಡಿವೈನ್ ಪಾರ್ಕ್ ಟ್ರಸ್ಟ್, ಉಡುಪಿ ಇದರ ಯೋಗ ಘಟಕವಾಗಿರುವ ಎಸ್. ಎಚ್. ಆರ್. ಎಫ್. ಯೋಗಬನ ಆಸ್ಪತ್ರೆಯ ಪ್ರಶಾಂತ ವಾತಾವರಣವು ರೋಗಿಯ ಸಮಗ್ರ ಹಾಗೂ ಸಂಶೋಧನಾಧಾರಿತ ರೋಗಶಮನಕ್ಕೆ ಪೂರಕವಾಗಿದೆ. ಇಲ್ಲಿ ಆಧ್ಯಾತ್ಮಿಕತೆಯೊಂದಿಗೆ ಸಮ್ಮಿಳಿತಗೊಂಡಿರುವ, ಸುಮಾರು ಐದು ಸಾವಿರ ವರ್ಷಗಳಿಗಿಂತಲೂ ಪುರಾತನವಾಗಿರುವ ಯೋಗ, ಆಯುರ್ವೇದ ಹಾಗೂ ಪ್ರಕೃತಿ ಚಿಕಿತ್ಸೆಯ ನವೀನ ಚಿಕಿತ್ಸಾ ಕ್ರಮಗಳು ಜೀವನದ ಎಲ್ಲ ವರ್ಗದ ಜನರಿಗೂ ಲಭ್ಯವಾಗುವಂತೆ ಕ್ರಮ ಕೈಗೊಂಡಿರುವುದು ಸಂಸ್ಥೆಯ ಸಾಮಾಜಿಕ ಕಳಕಳಿಗೆ ಸಾಕ್ಷಿಯಾಗಿದೆ. ವ್ಯಾಪಕ ಸಂಶೋಧನೆ ಮತ್ತು ಅಂಗೀಕೃತ ವಿಧಿ–ವಿಧಾನಗಳ ಸಹಾಯದಿಂದ ನಿಪುಣ ವೈದ್ಯರುಗಳ ನಿರ್ದೇಶನದಲ್ಲಿ ನಿರ್ವಹಿಸಲ್ಪಡುವ ಯೋಗ ವಿಜ್ಞಾನ ಹಾಗೂ ವೈದ್ಯಕೀಯ ಚಿಕಿತ್ಸಾ ಪದ್ಧತಿಗಳು ಆಧುನಿಕ ಮತ್ತು ಅಧ್ಯಾತ್ಮಿಕ ಉಪಶಮನ ಪ್ರಕ್ರಿಯೆಗಳೊಂದಿಗೆ ಸಮ್ಮಿಳಿತವಾದಾಗ ಸಿಗುವ ಉತ್ತರವೇ ಎಸ್ ಎಚ್ ಆರ್ ಎಫ್ ಯೋಗಬನ ಎಂಬ ವಿಶಿಷ್ಟ ಆಸ್ಪತ್ರೆ. ಯೋಗ ಅಧ್ಯಯನ, ಯೋಗ ಚಿಕಿತ್ಸೆ ಮತ್ತು ಯೋಗ ಸಂಶೋಧನೆ ಪ್ರತಿಷ್ಠಾನದ ಪ್ರತಿಯೊಂದು ಪ್ರಕ್ರಿಯೆಗಳಲ್ಲೂ ಹಾಸು ಹೊಕ್ಕಾಗಿದೆ.

ಸಂಸ್ಥೆಯ ವೈಶಿಷ್ಟ್ಯತೆ ಮತ್ತು ಲಭ್ಯ ಸೇವೆಗಳು

- ದೇವಾಲಯ ವಾಸ್ತುಶಿಲ್ಪವನ್ನು ಅಳವಡಿಸಿಕೊಂಡು, ಗರ್ಭಗುಡಿಯಿರುವ ಪವಿತ್ರ ಸ್ಥಳದಲ್ಲಿ, ವಾಸ್ತುಪುರುಷ ಮಂಡಲ ಶಾಸ್ತ್ರಕ್ಕನುಗುಣವಾಗಿ ಶ್ರೀ ಗುರೂಜೀ – ಸ್ವಾಮಿ ವಿವೇಕಾನಂದರ ಭವ್ಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಮೂರ್ತಿಯ ಸುತ್ತಲೂ ತೆರೆದ ವಾತಾವರಣದಲ್ಲಿ ಕುಳಿತು ಧ್ಯಾನಿಸಲು ಮೆಟ್ಟಿಲುಗಳಿವೆ.
- ಕಮಲದ ಎಸಳುಗಳಂತೆ ರಚಿತಗೊಂಡಿರುವ ಕೆರೆಯ ಮಧ್ಯಭಾಗದಲ್ಲಿ ಭವ್ಯವಾಗಿ ತಲೆಯೆತ್ತಿ ನಿಂತಿದೆ ಶ್ರೀ ಗುರೂಜೀ ಸ್ವಾಮಿ ವಿವೇಕಾನಂದರ ದಿವ್ಯ ಮೂರ್ತಿ. ಕೆರೆಯಲ್ಲಿ ಅರಳುವ ಕಮಲದ ಹೂಗಳು ಶ್ರೀ ಗುರೂಜೀಯವರ ಪಾದಪದ್ಮಗಳಿಗೆ ಅರ್ಪಿತ. ಈ ಮೂರ್ತಿ 35 ಅಡಿ ಎತ್ತರವಿದ್ದು, ಜಗತ್ತಿನಲ್ಲೇ ಅತೀ ಎತ್ತರದ ಸ್ವಾಮಿ ವಿವೇಕಾನಂದರ ಮೂರ್ತಿ ಎಂಬ ಹೆಗ್ಗಳಿಕೆಯಿದೆ.
- ರೋಗೋಪಶಮನ ನಡಿಗೆ ಮತ್ತು ಉಲ್ಲಾಸಕರ ನಡಿಗೆಗಾಗಿ ಮಂಡಲಾಕೃತಿಯ ನಡಿಗೆಯ ಪಥಗಳು ನಿಮ್ಮನ್ನು ಆಹ್ವಾನಿಸುತ್ತಿವೆ. ಆಸ್ಪತ್ರೆಯ ಒಳ ಮತ್ತು ಹೊರ ಆವರಣದಲ್ಲಿ ಇಂತಹ ಮೂರು ಪಥಗಳಿವೆ. ವೃತ್ತಾಕಾರದ ನಡಿಗೆಯ ಪಥದಲ್ಲಿ ನಡೆಯುವಾಗ ನಮ್ಮ ಮನಸ್ಸು ಕೂಡ ಲಯವನ್ನು ಕಂಡುಕೊಂಡು ನಮ್ಮ ಆರೋಗ್ಯಕ್ಕೆ ಪುಷ್ಟಿ ನೀಡುತ್ತದೆ ಎನ್ನುವುದು ವೈಜ್ಞಾನಿಕ ಸತ್ಯಕೂಡ ಆಗಿದೆ.
- ಹಸಿರು ಹೊದ್ದು ಮಲಗಿರುವ ವಿಶಾಲ ಆವರಣದಲ್ಲಿ ಹುದುಗಿರುವ ಸಸ್ಯ – ಪ್ರಾಣಿ – ಪಕ್ಷಿ ಸಂಕುಲ ಇವೆಲ್ಲವೂ ಅತಿಥಿಗಳಿಗೆ ಪ್ರಕೃತಿಯ ಮಧ್ಯದಲ್ಲಿ ಇರುವಂಥ ನಯನ ಮನೋಹರ ಅನುಭವ ನೀಡುವುದರಲ್ಲಿ ಸಂಶಯವಿಲ್ಲ. ವಿಶೇಷವಾದ ಹುಲ್ಲು ಮತ್ತು ಚಿಕ್ಕ ಕಲ್ಲುಗಳಿಂದ ಕೂಡಿದ ವಾಕ್ ವೇ, ರೆಫ್ಲೆಕ್ಸೋಲಜಿಗೆ ಅನುಗುಣವಾಗಿದೆ.

ನಮ್ಮ ಕಾರ್ಯಕ್ರಮಗಳು:

ನಮ್ಮಲ್ಲಿ 3, 5 ಮತ್ತು 7 ದಿನಗಳ ವಿಶೇಷ ಕಾರ್ಯಕ್ರಮಗಳು ನಡೆಯುತ್ತವೆ. ಕೊನೆಯ ಪುಟದಲ್ಲಿ ನೀಡಲಾದ QR ಕೋಡ್‌ಅನ್ನು ಬಳಸಿಕೊಂಡು ನಿಮಗೆ ಸರಿಹೊಂದುವ ಕಾರ್ಯಕ್ರಮಕ್ಕೆ ಮುಂಚಿತವಾಗಿ ಬುಕ್ ಮಾಡಿಕೊಳ್ಳಬಹುದು.

ನಮ್ಮಲ್ಲಿರುವ ವೈಶಿಷ್ಟ್ಯಪೂರ್ಣ ಸೇವೆಗಳು

- ತಮ್ಮ ವಾಸ್ತವ್ಯದ ಅವಧಿಯಲ್ಲಿ ವ್ಯಕಿಗತ ಸಮಾಲೋಚನೆ ಮತ್ತು ಸಲಹೆ–ಸೂಚನೆಗಳನ್ನು ರೋಗಿಯ ರೋಗಲಕ್ಷಣಕ್ಕನುಗುಣವಾಗಿ ನೀಡಲಾಗುವುದು.
- ತಜ್ಞ ವೈದ್ಯರು ಹಾಗೂ ಸಹಾಯಕ ವೈದ್ಯರುಗಳ ನಿರಂತರ, ಸೂಕ್ಷ್ಮ ಮೇಲ್ವಿಚಾರಣೆಯಲ್ಲಿ ನಮ್ಮಲ್ಲಿ ವಿಶೇಷವಾದ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಯೋಗ ಚಿಕಿತ್ಸೆ, ಪರಿಸರ ಚಿಕಿತ್ಸೆ, ಹಿತಾಹಾರ ಚಿಕಿತ್ಸೆ, ಸಂಗೀತ ಚಿಕಿತ್ಸೆ, ಹಾಸ್ಯ ಚಿಕಿತ್ಸೆ, ವಾಯು ವಿಹಾರ, ಮೌನ ಚಿಕಿತ್ಸೆ, ಆಧ್ಯಾತ್ಮ ಚಿಕಿತ್ಸೆ, ಪ್ರಾಣಾಯಾಮ ಮತ್ತು ಧ್ಯಾನ ಕೇಂದ್ರಿತ ಚಿಕಿತ್ಸೆಗಳನ್ನು ನೀಡಲಾಗುತ್ತದೆ.
- ವೈದ್ಯರು ಮತ್ತು ಯೋಗ ಶಿಕ್ಷಕರುಗಳಿಂದ ಯೋಗ, ಆಯುರ್ವೇದ, ಸಮತೋಲಿತ ಆಹಾರ ಕ್ರಮ, ಆರೋಗ್ಯ ಮತ್ತು ಸುಸ್ಥಿರ ಬದುಕಿನ ಬಗ್ಗೆ ನಿರಂತರವಾಗಿ ಶಿಬಿರಗಳು, ಚರ್ಚಾಕೂಟಗಳು ಮತ್ತು ಉಪನ್ಯಾಸ ಕಾರ್ಯಕ್ರಮಗಳಿರುತ್ತವೆ.
- ನಮ್ಮಲ್ಲಿ ಎಲ್ಲಾ ಆಹಾರಗಳನ್ನು, ಪೌಷ್ಟಿಕಾಂಶಗಳನ್ನು ಕಾಯ್ದುಕೊಂಡು ಅತ್ಯಂತ ಮುತುವರ್ಜಿಯಿಂದ ತಯಾರಿಸಲಾಗುತ್ತದೆ. ಪ್ರತಿಯೊಬ್ಬ ರೋಗಿಗೂ ವೈದ್ಯರೊಂದಿಗೆ ಸಮಾಲೋಚಿಸಿದ ನಂತರವಷ್ಟೇ ಮಿತಾಹಾರ ಚಿಕಿತ್ಸಾ ಕ್ರಮಕ್ಕನುಗುಣವಾಗಿ ಸೂಚಿಸಿದ ಆಹಾರವನ್ನಷ್ಟೇ ನೀಡಲಾಗುವುದು.
- ಮನಸ್ಸು ಮುದಗೊಳ್ಳಲು ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳಲ್ಲಿ ಭಾಗವಹಿಸಲು ನಿರ್ದಿಷ್ಟ ಸಮಯವನ್ನು ಮೀಸಲಿಡಲಾಗಿದೆ.
- ವಿಶೇಷವಾದ ಸೈಕ್ಲಿಂಗ್ ವ್ಯವಸ್ಥೆ ಅತಿಥಿಗಳ ಖುಷಿಯನ್ನು ಇಮ್ಮಡಿಯಾಗಿಸಲು ಇಂಬು ಕೊಡುತ್ತದೆ.
- **ಸಾಂಸ್ಕೃತಿಕ ಚಟುವಟಿಕೆಗಳು:** ನಮ್ಮ ಸಂಸ್ಥೆಯ ಸನಿಹದಲ್ಲೇ ಅಗಾಧವಾಗಿ ಮೈಚಾಚಿಕೊಂಡಿರುವ ಅರಬ್ಬೀ ಸಮುದ್ರ ಕಿನಾರೆಗೆ ಒಂದು ದಿನದ ಪ್ರವಾಸವನ್ನು ತಮ್ಮ 7 ದಿನಗಳ ವಾಸ್ತವ್ಯದ ಅವಧಿಯಲ್ಲಿ ಆಯೋಜಿಸಲಾಗುವುದು. ತುಂಬಾ ಖುಷಿಯಾದ ಸಾಂಸ್ಕೃತಿಕ ಹಾಗೂ ಪ್ರವಾಸದ ಅನುಭವ.

ನಮ್ಮ ವಿಶೇಷ ಚಿಕಿತ್ಸೆಗಳು:

- ವೈಜ್ಞಾನಿಕವಾಗಿ ತೂಕ ಇಳಿಸಿಕೊಳ್ಳುವ ಮಾರ್ಗದರ್ಶನ
- ಸೊಂಟ, ಬೆನ್ನು, ಗಂಟು ನೋವಿನ ನಿವಾರಣೆ
- ಮಧುಮೇಹ, ಅಧಿಕ ರಕ್ತದೊತ್ತಡ ನಿವಾರಣೆ
- ನಿದ್ರಾಹೀನತೆ, ಖಿನ್ನತೆಯ ಉಪಶಮನ
- ಒತ್ತಡ, ಉದ್ವೇಗದ ನಿವಾರಣೆ
- ಸಿಟ್ಟಿನ ನಿಯಂತ್ರಣ
- ಉತ್ತಮ ಆರೋಗ್ಯದ ಕಡೆಗೆ ಪಯಣ
- ವಿಶ್ರಾಂತಿ ಹಾಗೂ ಆನಂದದಿಂದ ಕುಟುಂಬದೊಂದಿಗೆ ಸಮಯ ಕಳೆಯಲು ಸದವಕಾಶ.

ಒಟ್ಟಿನಲ್ಲಿ ನಮ್ಮ ಪೂರ್ಣ ಜೀವನಶೈಲಿಯ ನಿರ್ವಹಣೆ.

ವ್ಯಕ್ತಿಯ ಮನ–ಮನಸ್ಸು, ದೇಹ ಮತ್ತು ಆತ್ಮವನ್ನು ಸುಸ್ಥಿತಿಯಲ್ಲಿ ಹಾಗೂ ಸಾಮರಸ್ಯದಿಂದ ನಿರ್ವಹಿಸುವುದರತ್ತ ಆಸ್ಪತ್ರೆಯು ಹೆಜ್ಜೆನ ಗಮನ ನೀಡುತ್ತದೆ.

ಡಾ. ವಿವೇಕ್ ಎ. ಉಡುಪರು ಸಂಸ್ಥೆಯ ಆಡಳಿತ ನಿರ್ದೇಶಕ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿರುತ್ತಾರೆ. ಯೋಗ ಮತ್ತು ಪುನರ್ವಸತಿ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯ ಜೊತೆಗೆ ಶ್ರೀಯುತರು ಪ್ರಕೃತಿ ಚಿಕಿತ್ಸೆ ಹಾಗು ಯೋಗ ವಿಜ್ಞಾನದಲ್ಲಿ ಪದವಿ ಪಡೆದಿರುತ್ತಾರೆ. ಇವರು ತಮ್ಮ ನಾಲ್ಕು ವರ್ಷದ ಪದವಿಯ ಅವಧಿಯಲ್ಲಿ ಪ್ರತೀ ವರ್ಷ ಹೆಮ್ಮೆಯ ಜಿಂದಾಲ್ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡಿರುತ್ತಾರೆ.

ಎಸ್.ಎಚ್.ಆರ್.ಎಫ್ ಯೋಗಬನ, ಪ್ರಕೃತಿಯೊಂದಿಗೆ ನಮ್ಮನ್ನು ಸಮರ್ಪಿಸಿಕೊಂಡಾಗ ನಮಗೆ ಸಿಗುವ ಒಂದು ವಿಸ್ಮಯಗಳ ಆಗರ. ಶ್ರೀ ಗುರೂಜೀ ಮತ್ತು ಪೂಜ್ಯ ಡಾಕ್ಟರ್‌ಜೀ ಯವರ ತತ್ವ ಸಿದ್ಧಾಂತ – ಸಾಧನೆಯ ಫಲವೇ ಈ ಆಸ್ಪತ್ರೆ. ಶ್ರೀ ಗುರೂಜೀ ಎಂದು ಇಲ್ಲಿ ಆದರದಿಂದ ಕರೆಯಲ್ಪಡುವ ಸ್ವಾಮೀ ವಿವೇಕಾನಂದರ ಜೀವನ ಗಾಥೆಯ ಪರಿಶ್ರಮ, ಬದ್ಧತೆ ಮತ್ತು ಸಾಧನೆಗಳ ಅನಾವರಣವೇ ಎಸ್. ಎಚ್. ಆರ್. ಎಫ್. ಯೋಗಬನದ ಸ್ಥಾಪನೆಗೆ ಬುನಾದಿ.